448

ಪ್ಯಾಟೇರ್ಷ ಆಫಿಸ್.

ಪ್ರಸಿದ್ಧ ಪತ್ರಿಕೆ.

ತಾರೀಖು 5ನೇ ಜೂ೯ 1890.

ಮೈಸೂರಿನಲ್ಲಿ ಕಟ್ಟಲ್ಪಟ್ಟಿರತಕ್ಕ "ಜ್ಯೂಬಿಲಿ ಇನ್‌ಸ್ಟಿಟ್ಯೂಟ್" ಯೆಂಬ ಕಟ್ಟಡದಲ್ಲಿ ಇಡಲ್ಪಡುವದಕ್ಕೋಸ್ಕರ ಶಿಲೆಯಲ್ಲಿ ಆಗಲಿ ಅಥವಾ ಲೋಹದಲ್ಲಿ ಆಗಲಿ ಮಾಡಲ್ಪಟ್ಟಿರತಕ್ಕ ಹಿಂದೂ ದೇವರುಗಳ ವಿಗ್ರಹಗಳನ್ನು ಚದರ ಆಡಿ ವಂದಕ್ಕೆ 2½ ರೂಪಾಯಿ ದರದ ಮೇರೆ ಕೊಂಡುಕೊಳ್ಳುತ್ತೇವೆ. ವಿಗ್ರಹಗಳ ಉನ್ನತವು 2 ಅಡಿ 3 ಅಂಗುಲ ಅಥವಾ 1 ಅಡಿ 3 ಅಂಗುಲ ಯಿರಬೇಕು. ಯಿಷ್ಟ ವಿದ್ದವರು ಬರದುಕೊಳ್ಳಬಹುದು.

ಸ್ಯಾಂಡಿಷ್ ಲೀ,
ಸ್ಯಾನಿಟೆರಿ ಇಂಜನಿಯರ್ ಮೈಸೂರ್ ಸ್ಪೆಷಲ್ ಇಂಪ್ರೂವ್‌ಮೆಂಟ್ಸ್ ಡಿವಿಜ್.

ಹಾಸನ ಡಿಸ್ಟ್ರಿಕ್ಟು.

1890ನೇ ಇಸವಿ 12ನೇ ಜೂ೯.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಹೊಳೇನರಶೀಪುರ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕುದಾರಿಯು ಯೆಂಬ ದಫಾ ಹರಾಜ್ ಮಾಡಿಸಿದ್ದರಲ್ಲಿ ಯಾರೂ ದರಖಾಸ್ತು ಮಾಡಲಿಲ್ಲವಾಗಿ ಪುನಹ ಹೊಳೇನರಶೀಪುರ ತಾಲ್ಲೂಕು ಕಚ್ಚೇರಿಯಲ್ಲಿ ಸ್ ೧೮೯೦ನೇ ಇಸವಿ ಜುಲೈ 18ನೇ ತಾರೀಖು ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುವದು.

2. ಅಮಲ್‌ದಾರ್ರು ಅಥವಾ ಟಿರಸ್ತೆದಾರ್ರಾಗಲಿ ಹರಾಜ್ ಮಾಡಿಸುವರು.

3. ಈ ಹರಾಜಿನ ಚಡ ದರಖಾಸ್ತು ಹಾಸನ ಡಿಸ್ಟ್ರಿಕ್ಟು ಡಿಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡುವ ಪರಿಯಂತ್ರ ಖಾಯಂ ಆದ್ದಾಗಿ ತಿಳಿದು ಕೊಳ್ಳಕೂಡದು.

4. ಈ ಇಜಾರೆಯು ಸ್ ೧೮೯೧ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿ ಯಿರತಕ್ಕದ್ದು.

5. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡ 25 ರೂಪಾಯಿ ನಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡಬೇಕಲ್ಲದೆ ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಡಿಪ್ಯುಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದೊಳಗಾಗಿ ಕ್ರಯದ ಪೈಟ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ನೊಂದಾಣಿಯಂತೆ ಆಗುವ ಲೋಕಲ್‌ಸೆಸ್ ದೇಖಿಲ್ ಬಾಕಿ ಕ್ರಯದ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಯಿಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದು ಕೊಳ್ಳಲ್ಪಡುವದು, ಹಾಂಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡದಿದ್ದರೂ ಅಥವಾ ಬಾಕಿ ಕ್ರಯದ ಮೊಬಲಗು ಹಾಜರ್ಮಾಡದಿದ್ದರೂ ಹಕ್ಕುದಾರಿಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ನುಕ್ಸಾನಿಗೂ ಒಳಪಟ್ಟು ಪುನಹ ವಿಕ್ರಯಿಸಲ್ಪಡುವದು.

6. ಹರಾಜು ಷರತ್ತುಗಳು.

(a) ಹಿಡುವಳಿ ಜಮೀನಿನಲ್ಲಿ ಯಿರತಕ್ಕ ಕಲ್ಲುಗಳನ್ನ ತೆಗದುಕೊಳ್ಳಬೇಕಾದರೆ ಹಿಡುವಳಿದಾರ್ರ ಸಮ್ಮತಿಯನ್ನ ಪಡಿಯಬೇಕು. ಜಮೀರ್ ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತಪ್ರಯೋಜನಕ್ಕಾಗಿ ತೆಗದು ಕೊಳ್ಳಲೂ ಕೂಡದು, ಯಿಜಾರೆದಾರನಿಗೆ ಮಾರಬೇಕೇ ಹೊರ್ತು ಯಿತರ ಜನಗಳಿಗೆ ಮಾರಲೂ ಕೂಡದು.

(b) ಯಿಜಾರೆದಾರನು ಹುಲ್ಲು ಬನ್ನಿ ಯಿಜಾರೆದಾರರ ಜರೂವು ಹಕ್ಕಿನಲ್ಲಿ ಪ್ರವೇಶನ ಕೂಡದು.

(c) ಬಂಜರು ಜಮೀನ್‌ಗಳು ಸಾಗುವಳಿ ಬಗ್ಗೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟು ಬಿಡುವದಕ್ಕೆ ಕುರಂಗದ ಯಿಜಾರೆದಾರನು ಅಡ್ಡಿ ಹೇಳಕೂಡದು. ಆಂಥಾ ಜಮೀನ್‌ಗಳಲ್ಲಿ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಯಿಜಾರೆದಾರನಿಗೆ ಯುಳದಿರುತ್ತೆ.

(d) ಯಿಜಾರೆದಾರನು ಕಲ್ಲುಗಣಿಗೋಸ್ಕರ ಜಮೀನ್‌ಗಳನ್ನ ಅಗಿಯಾಕೂಡದು, ಬಂದು ವೇಳೆ ಹಾಗೆ ಆಗದಲ್ಲಿ ಆ ಗುಂಡಿಗಳನ್ನ ತಕ್ಷಣ ಮುಚಿ ಬಿಟ್ಟು ಸಾಗುವಳಿಗೆ ಜಮೀನ್ ಲಾಯಕ್ ಯಿರುಚ ಹಾಂಗೆ ಮಾಡಬೇಕು.

ಸಿ. ಮಾದಯ್ಯ,
ಅಫಿಷಿಯೇಟಿಂಗ್ ಡಿಪ್ಯುಟಿ ಕಮ್ಮಿಷನರ್.